ದಿಃ 10.02.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಐ.ಎಮ್.ಹೆಚ್. ವಕೀಲರಿಂದ ,**

10. ನಿಪಿ - 15 ಮತ್ತು 16 ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕಿನ ಜಮೀನುಗಳಿಗೆ ಸಂಬಂಧಿಸಿದ್ದವು ಎಂದರೆ ಸರಿ. ನಿಪಿ - 15, 4 ಗುಂಟೆ ಖುಷ್ಕಿ ಭಂಜರು ಜಮೀನಿನ ಸಂಬಂಧ ಇರುತ್ತದೆ ಎಂದರೆ ಸರಿ. ನಿಪಿ - 15 ಹಾಗೂ 16 ನನ್ನ ತಂದೆಯ ಹೆಸರಿಗೆ ಇವೆ ಎಂದರೆ ಸರಿ. ಸದರಿ ಪಹಣಿಗಳಲ್ಲಿ ಬೆಳೆಯನ್ನು ನಮೂದಿಸಿಲ್ಲ ಎಂದರೆ ಸಾಕ್ಷಿ ಅದರಲ್ಲಿ ತೆಂಗು ಇರುತ್ತದೆ ಎಂದು ನುಡಿಯುತ್ತಾರೆ. ನಿಪಿ - 13 ಮಾರುತಿ ಓಮಿನಿ ಕಾರಿನ ಸಂಬಂಧ ಇರುತ್ತದೆ. ಅದು 2013 ರ ಮಾಡೆಲ್ ಆಗಿರುತ್ತದೆ. ನಿಪಿ - 14 ಟೊಯೋಟಾ ಇನೋವಾ ಕಾರಿನ ಸಂಬಂಧ ಆಗಿದ್ದು ಅದು 2005 ರ ಮಾಡೆಲ್ ಆಗಿರುತ್ತದೆ. ಸಾಮಾನ್ಯವಾಗಿ ಜನರು ಹೊಸವಾಹನಗಳನ್ನು ಬಾಡಿಗೆಗೆ ಪಡೆಯುತ್ತಾರೆ ಎಂದರೆ ಸರಿ. ನಾನು ನನ್ನ ಬ್ಯಾಂಕ್ ಖಾತೆಯ ವಿವರಗಳನ್ನು ನಿಪಿ - 7 ರಿಂದ 12 ರಲ್ಲಿ ನಮೂದಿಸಿಲ್ಲ ಎಂದರೆ ನನಗೆ ತಿಳಿದಿಲ್ಲ. ನನ್ನ ಬ್ಯಾಂಕ್ ಪಾಸ್ ಪುಸ್ತಕವನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿ. ಹಾಲಿ ಕಾರಿನ ಬಾಡಿಗೆಯನ್ನು ಆನ್ ಲೈನ್ ಮೂಲಕ ಹೆಚ್ಚಾಗಿ ಪಾವತಿಸುತ್ತಾರೆ ಎಂದರೆ ಸರಿ. ನಿಪಿ - 7 ರಿಂದ 12 ಅನ್ನು ನಾನು ಹೇಳಿದಂತೆ ಸಲ್ಲಿಸಲಾಗಿದೆ ಎಂದರೆ ಸರಿ. ನನ್ನ ಆದಾಯಕ್ಕೆ ಸಂಬಂಧಿಸಿದಂತೆ ನಾನು ಯಾವುದೇ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನಿಪಿ - 7 ರಿಂದ 12 ರಲ್ಲಿ ನಾನು ಆರೋಪಿಗೆ ಸಾಲ ನೀಡಿದ ಸಂಗತಿಯನ್ನು ತಿಳಿಸಿಲ್ಲ ಎಂದರೆ ಸರಿ. ನಿಪಿ - 19 ರಲ್ಲಿ ಆರೋಪಿಯ ಹೆಂಡತಿ ನನ್ನಿಂದ ಸಾಲ ಪಡೆದ ಬಗ್ಗೆ ನಮೂದು ಇರುತ್ತದೆ ಎಂದರೆ ಸರಿ. ನನ್ನ ಹಾಗೂ ಆರೋಪಿ ನಡುವೆ ಯಾವುದೇ ಹಣಕಾಸಿನ ವ್ಯವಹಾರ ನಡೆದಿಲ್ಲ ಎಂದರೆ ಸರಿಯಲ್ಲ.

This is a True Copy of the Court Records Online. Authenticated @ districts.ecourtsindia.com/cnr/KASM300027892023/truecopy/order-4.pdf

11. ಆರೋಪಿಯ ಹೆಂಡತಿಗೆ ಏಕ ಕಂತಿನಲ್ಲಿ ರೂ. 7,50,000/- ಗಳನ್ನು ನೀಡಿಲ್ಲ ಎಂದರೆ ಸರಿ. ನಾನು ಆರೋಪಿಯ ಹೆಂಡತಿಗೆ ಸಾಲ ನೀಡಿದ ಬಗ್ಗೆ ಯಾವುದೇ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿ. ಆರೋಪಿಯ ಹೆಂಡತಿಯ ಮೇಲೆ ಒತ್ತಡ ಹೇರಿ ಆಕೆಯಿಂದ ನಿಪಿ - 19 ಹೇಳಿಕೆಯನ್ನು ಪೋಲೀಸರು ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಪೋಲೀಸರು ಆರೋಪಿಯ ಹೆಂಡತಿ ನೀಡಿದ್ದ ದೂರಿನ ಆಧಾರದ ಮೇಲೆ ನನ್ನನ್ನು ಠಾಣೆಗೆ ಕರೆಸಿದ್ದರು ಎಂದರೆ ಸರಿ. ಆ ಸಮಯದಲ್ಲಿ ಪೋಲೀಸರು ನಿಪಿ - 19 ಹೇಳಿಕೆ ಪಡೆದಿರುತ್ತಾರೆ ಎಂದರೆ ಸರಿ. ನಾನು ಆರೋಪಿಗೆ ಯಾವುದೇ ಸಾಲ ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿ ನಿಪಿ - 1 ಚೆಕ್ಕನ್ನು ಯಾವುದೇ ಸಾಲದ ಮರುಪಾವತಿಗಾಗಿ ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿಯಿಂದ ಅಕ್ರಮವಾಗಿ ಹಣ ಪಡೆಯಲು ಸುಳ್ಳು ದೂರು ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

*(ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)*

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.**

**(ಟಿ.ಶ್ರೀಕಾಂತ್)**
**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ**

This is a True Copy of the Court Records Online. Authenticated @ districts.ecourtsindia.com/cnr/KASM300027892023/truecopy/order-4.pdf

www.ecourtsindia.com